# ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ, ಮಹಾರಾಷ್ಟ್ರ

*[ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು (ಭಾ. ಕೃ. ಅ. ಪ), ಕೃಷಿ ಮಂತ್ರಾಲಯ, ಭಾರತ ಸರ್ಕಾರ ]*

## ಹತ್ತಿ ಬೆಳೆಯ ಸಾಪ್ತಾಹಿಕ ಸಲಹೆ, 06 ರಿಂದ 12 ಆಗಸ್ಟ್, 2026 ರ ಅವಧಿಗೆ

*"ಈ ಸಲಹೆಯು ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳಿಂದ ಸ್ವೀಕರಿಸಿದ ಮಾಹಿತಿಯನ್ನು ಆಧರಿಸಿದೆ"*

### ಅ. ಮಣ್ಣಿನ ಆರೋಗ್ಯ, ಪೋಷಣೆ, ಹಾಗೂ ಕೀಟ ಮತ್ತು ರೋಗ ನಿರ್ವಹಣೆಯ ಕುರಿತಾದ ಸಾಮಾನ್ಯ ಸಲಹೆ

ಹೆಚ್ಚಿನ ಹತ್ತಿ ಇಳುವರಿಯು ಸಮತೋಲಿತ ಮಣ್ಣಿನ ಪೋಷಣೆ, ನೀರಿನ ನಿರ್ವಹಣೆ ಮತ್ತು ಪೂರ್ವಭಾವಿ ನಿರೀಕ್ಷಣೆ ಆಧಾರಿತ ಕೀಟ ಮತ್ತು ರೋಗ ನಿರ್ವಹಣೆಯನ್ನು ಅವಲಂಬಿಸಿದೆ. ಸಂಪೂರ್ಣ ಮತ್ತು ಸಮಗ್ರ ಬೆಳೆ ನಿರ್ವಹಣಾ ಯೋಜನೆಯನ್ನು ಅನುಷ್ಠಾನಗೊಳಿಸುವುದರಿಂದ ಸರಿಯಾದ ಬೆಳವಣಿಗೆ ಮತ್ತು ಚೈತನ್ಯವನ್ನು ಖಚಿತಪಡಿಸುವುದರೊಂದಿಗೆ ಬೇಸಾಯ ವೆಚ್ಚವನ್ನು ಕಡಿಮೆ ಮಾಡುತ್ತದೆ. ಇದಲ್ಲದೇ, ಬೆಳೆಯನ್ನು ವಿನಾಶಕಾರಿ ಕೀಟ ಮತ್ತು ರೋಗ ಹಾನಿಯಿಂದ ರಕ್ಷಿಸುತ್ತದೆ.

### ಮಣ್ಣಿನ ಆರೋಗ್ಯ ಮತ್ತು ಪೋಷಕಾಂಶ ನಿರ್ವಹಣೆ (INM)

- **ಸೂಕ್ಷ್ಮ ಪೋಷಕಾಂಶಗಳನ್ನು ಅತ್ಯುತ್ತಮವಾಗಿಸಿ:** ಬೆಳೆ ತಿರುಗುವಿಕೆ, ಸಾವಯವ ಗೊಬ್ಬರ ಮತ್ತು ಹೊದಿಕೆ ಬೆಳೆಗಳಿಗೆ ಆದ್ಯತೆ ನೀಡುವ ಮೂಲಕ ಮತ್ತು ಬಿತ್ತನೆ ಪೂರ್ವ ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ತರ್ಕಬದ್ಧ ರಾಸಾಯನಿಕ ಗೊಬ್ಬರವನ್ನು ಬಳಸುವ ಮೂಲಕ ಮಣ್ಣಿನ ಆರೋಗ್ಯವನ್ನು ಸುಧಾರಿಸಿ.

- **ಸೂಕ್ಷ್ಮ ಪೋಷಕಾಂಶಗಳನ್ನು ಅನ್ವಯಿಸಿ:** ಅಗತ್ಯವಿರುವಂತೆ ಉದ್ದೇಶಿತ ಸಿಂಪಡಣೆಗಳ ಮೂಲಕ ದ್ವಿತೀಯ ಮತ್ತು ಸೂಕ್ಷ್ಮ ಪೋಷಕಾಂಶಗಳ ಕೊರತೆಗಳನ್ನು (ಸತು, ಬೋರಾನ್, ಮ್ಯಾಂಗನೀಸ್ ಮತ್ತು ಮೆಗ್ನೀಸಿಯಮ್‌ನಂತಹ) ಪೂರ್ವಭಾವಿಯಾಗಿ ಪರಿಹರಿಸಿ.

### ರೋಗ ನಿರ್ವಹಣೆ (IDM)

- **ರೋಗ ತಡೆಗಟ್ಟುವ ಪದ್ಧತಿಗಳನ್ನು ನಿಯೋಜಿಸಿ:** ಮಣ್ಣಿನಿಂದ ಹರಡುವ ಮತ್ತು ಎಲೆಗಳಿಂದ ಹರಡುವ ರೋಗಕಾರಕಗಳ ನಿರ್ವಹಣೆಯನ್ನು ಸಮಗ್ರ ಕೃಷಿ ಪದ್ಧತಿಗಳ ಮೂಲಕ ಸಾಧಿಸಬೇಕು, ಇದರಲ್ಲಿ ಸರಿಯಾದ ಕ್ಷೇತ್ರ ನೈರ್ಮಲ್ಯ, ಜೈವಿಕ ಕೀಟನಾಶಕಗಳು ಮತ್ತು ಜೈವಿಕ ಗೊಬ್ಬರಗಳನ್ನು ಬೀಜ ಮತ್ತು ಮಣ್ಣಿನ ಉಪಚಾರಗಳಾಗಿ ಅನ್ವಯಿಸುವುದು, ಸಸ್ಯ ಆರೋಗ್ಯವನ್ನು ಹೆಚ್ಚಿಸಲು ಮತ್ತು ರೋಗದ ಸಂಭವವನ್ನು ನಿಗ್ರಹಿಸಲು ಸಹಾಯ ಮಾಡುತ್ತದೆ.
- **ಏಕಾಏಕಿ ರೋಗ ಪ್ರಸಾರ ನಿಯಂತ್ರಣ:** ಹೆಚ್ಚಿನ ಆರ್ದ್ರತೆಯ ಅವಧಿಯಲ್ಲಿ ನಿಯಮಿತ ಕ್ಷೇತ್ರ ಮೇಲ್ವಿಚಾರಣೆಯನ್ನು ಕೈಗೊಳ್ಳಬೇಕು ಮತ್ತು ಚಾಲ್ತಿಯಲ್ಲಿರುವ ಪರಿಸರ ಪರಿಸ್ಥಿತಿಗಳು ತ್ವರಿತ ರೋಗ ಬೆಳವಣಿಗೆ ಮತ್ತು ಹರಡುವಿಕೆಗೆ ಅನುಕೂಲಕರವಾದಾಗ ಮಾತ್ರ ಶಿಫಾರಸು ಮಾಡಲಾದ ಶಿಲೀಂಧ್ರನಾಶಕಗಳನ್ನು ವಿವೇಚನೆಯಿಂದ ಅನ್ವಯಿಸಬೇಕು.

### ಸಮಗ್ರ ಕೀಟ ನಿರ್ವಹಣೆ (IPM)

- ಕ್ಷೇತ್ರ ಶೋಧನೆ ನಡೆಸುವುದು: ಕಾಯಿಕೊರಕಗಳ ಜೊತೆಗೆ ರಸ ಹೀರುವ ಕೀಟಗಳನ್ನು (ಥ್ರಿಪ್ಸ್ ನುಸಿ , ಹೇನು, ಜಿಗಿ ಹುಳುಗಳು, ಮತ್ತು ಜೇಡ ಹುಳಗಳು) ನಿರೀಕ್ಷಣೆ ಮಾಡಲು ವಾರಕ್ಕೊಮ್ಮೆ ಕ್ಷೇತ್ರ ಶೋಧನೆ ಮಾಡಿ.
- ಜಿಗುಟು ಬಲೆ ಮತ್ತು ಜೈವಿಕ ಕೀಟನಾಶಕಗಳನ್ನು ಬಳಸಿ: ವಯಸ್ಕ ಪತಂಗಗಳ ಹಾರಾಟವನ್ನು ಪತ್ತೆಹಚ್ಚಲು ಹಾಗೂ ಮೊಟ್ಟೆ ಇಡುವ ಚಕ್ರಗಳನ್ನು ಊಹಿಸಲು ಋತುವಿನ ಆರಂಭದಲ್ಲಿ ಲಿಂಗಾಕರ್ಷಕ ಬಲೆಗಳನ್ನು ನೆಡಬೇಕು. ಪ್ರಾಥಮಿಕ ಪ್ರತಿಕ್ರಿಯೆಯಾಗಿ ಸಾವಯವ, ನೈಸರ್ಗಿಕ ಅಥವಾ ಸಸ್ಯ ಆಧಾರಿತ ಕೀಟನಾಶಕಗಳನ್ನು ಸಿಂಪಡಿಸಬೇಕು.
- ನೈಸರ್ಗಿಕ ಮಿತ್ರಕೀಟಗಳನ್ನು ಸಂರಕ್ಷಿಸಿ: ವ್ಯಾಪಕ ವ್ಯಾಪ್ತಿಯ ರಾಸಾಯನಿಕಗಳಿಗಿಂತ ನಿರ್ದಿಷ್ಟ ಕೀಟನಾಶಕಗಳನ್ನು ಆರಿಸುವ ಮೂಲಕ ಮಿತ್ರ ಕೀಟಗಳ ಸಂರಕ್ಷಣೆ ಮಾಡಬೇಕು.
- ರಾಸಾಯನಿಕ ಬಳಕೆ ನಿರ್ಬಂಧಿಸಿ: ಕೀಟಗಳ ಸಂಖ್ಯೆಯು ಆರ್ಥಿಕ ಗರಿಷ್ಟ ಮಿತಿಯನ್ನು ತಲುಪಿದಾಗ ಮಾತ್ರ, ಲೇಬಲ್-ಶಿಫಾರಸು ಮಾಡಿದ ರಾಸಾಯನಿಕ ಕೀಟನಾಶಕಗಳನ್ನು ಕೊನೆಯ ಉಪಾಯವಾಗಿ ಬಳಸಬೇಕು.

## ಬ. ನಿರ್ದಿಷ್ಟ ಸ್ಥಳಕ್ಕೆ ಸಂಬಂಧಿಸಿದ ಸಲಹೆ

| ಕರ್ನಾಟಕ | ಕಳೆದ ವಾರದಲ್ಲಿ ಬಿದ್ದ ಮಳೆಯ ವಿವರ (ಮಿ.ಮೀ) | | | | | | | IMDಯ ಪ್ರಕಾರ ಮಳೆಯ ಮುನ್ಸೂಚನೆ (ಮಿ.ಮೀ) | | | | |
|---|---|---|---|---|---|---|---|---|---|---|---|---|
| ತಿಂಗಳು | ಜುಲೈ/ಆಗಸ್ಟ್ | | | | | | | | | | | |
| ದಿನಾಂಕ | 28 | 29 | 30 | 31 | 01 | 02 | 03 | 05 | 06 | 07 | 08 | 09 |
| ಧಾರವಾಡ | 3 | 5 | 1 | 0.2 | 9 | 0.4 | 3 | 2 | 1.9 | 2.6 | 3 | 2.7 |
| ಹಾವೇರಿ | 4 | 2 | 7 | 5 | | | | 2.2 | 2.1 | 2.4 | 3.3 | 3.1 |
| ಮೈಸೂರು | 0 | 0 | 0 | 0 | 6 | 0 | 0 | 2.1 | 2.4 | 1.1 | 3.1 | 4.6 |

| ಮಳೆಯ ಮಾಹಿತಿಯ ಮಾದರಿ | | | | | | ಮಳೆಯ ಮಾಹಿತಿಯ ಮೂಲ: |
|---|---|---|---|---|---|---|
| ಮಳೆಯ ಪ್ರಮಾಣ (ಮಿ.ಮೀ) | 0.1-2.4 | 2.5-15.5 | 15.6-64.4 | 64.5-115.5 | 115.6-204.4 | http://nwp.imd.gov.in/bias/dist_fcst.htm |

**ಬೆಳೆಯ ಸ್ಥಿತಿ:**

ಧಾರವಾಡದಲ್ಲಿ ಬೆಳೆಯು 43 ರಿಂದ 48 ದಿನಗಳ ಹೂವಾಡುವ ಹಂತದಲ್ಲಿದೆ. ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಲ್ಲಲ್ಲಿ ಮಳೆಯಾಗಿದೆ. ಕಳೆ ನಿರ್ವಹಣೆಗಾಗಿ ಕೈಯಿಂದ ಕಳೆ ತೆಗೆಯುವಿಕೆ ಮತ್ತು ಅಂತರ ಬೇಸಾಯದ ಕ್ರಮಗಳನ್ನು ಕೈಗೊಳ್ಳಲಾಯಿತು. ಕೆಲವು ಹೊಲಗಳಲ್ಲಿ ಕಳೆಗಳ ಹಾವಳಿ ಕಂಡುಬಂದಿದ್ದು, ಗರಿಕೆ, ಜೇಕ ಇತ್ಯಾದಿ ಹುಲ್ಲುಗಳು ಕಾಣಿಸಿಕೊಂಡಿವೆ. ಮೂತಿ ಹುಳು ಮತ್ತು ಥ್ರಿಪ್ಸ್ ನುಸಿಗಳ ಬಾಧೆಯು ಬೆಳೆಗಳಿಗೆ ಹಾನಿ ಮಾಡಿವೆ. ಆದರೇ, ಯಾವುದೇ ರೋಗಗಳ ಬಾಧೆ ಕಂಡುಬಂದಿಲ್ಲ.

ರಾಯಚೂರಿನಲ್ಲಿ, ಬಿತ್ತನೆಯಾದ ಬೆಳೆಯು 44 ದಿನಗಳದಾಗಿದ್ದು, ಸದ್ಯ ಸಸ್ಯ ಬೆಳವಣಿಗೆಯ ಹಂತದಲ್ಲಿದೆ. ಹತ್ತಿ ಬೆಳೆದಿರುವ ಒಟ್ಟು ಪ್ರದೇಶದ ಪೈಕಿ ಸುಮಾರು ಶೇ. 30 ರಷ್ಟು ಪ್ರದೇಶದಲ್ಲಿ ಹರಗುವ ಕೆಲಸ ನಡೆದಿದೆ. ಮಳೆಯ ಅಭಾವದಿಂದಾಗಿ ಹತ್ತಿ ಬೆಳೆ ಒಣಗಿ ಹೋಗುತ್ತಿರುವುದರಿಂದ, ಒಟ್ಟು ಹತ್ತಿ ಬೆಳೆಯುವ ಪ್ರದೇಶವು ಗಣನೀಯವಾಗಿ ಕಡಿಮೆಯಾಗುವ ಸಾಧ್ಯತೆಯಿದೆ. ಥ್ರಿಪ್ಸ್ ನುಸಿ ಮತ್ತು ಜಿಗಿಹುಳು ಕೀಟಗಳ ಬಾಧೆಯು ಆರ್ಥಿಕ ಗರಿಷ್ಟ ಮಟ್ಟಕ್ಕಿಂತ (ETL) ಹೆಚ್ಚಾಗಿರುವುದು ವರದಿಯಾಗಿದೆ.

ಚಾಮರಾಜನಗರದಲ್ಲಿ, ಬೆಳೆಯು ಹೂಬಿಡುವ ಹಂತದಿಂದ ಕಾಯಿ ಕಟ್ಟುವ ಹಂತದವರೆಗಿನ ಅವಧಿಯಲ್ಲಿದೆ (72 ರಿಂದ 87 ದಿನಗಳು). ಯೂರಿಯಾ ಗೊಬ್ಬರವನ್ನು ಮೇಲುಗೊಬ್ಬರವಾಗಿ ಹಾಕುವುದು, ಕಳೆ ತೆಗೆಯುವುದು, ಅಂತರ ಬೇಸಾಯ ಮತ್ತು ಮಣ್ಣು ಏರಿಸುವ ಕೆಲಸಗಳು ನಡೆಯುತ್ತಿವೆ. ಪ್ರತಿ 3 ಎಲೆಗಳಿಗೆ 03-05 ರಷ್ಟು ಸಂಖ್ಯೆಯಲ್ಲಿ ಜಿಗಿಹುಳುಗಳ ಬಾಧೆಯು ಕಂಡುಬಂದಿದೆ.

**ಸಲಹೆ:**

ಧಾರವಾಡದಲ್ಲಿ, ಕಳೆ ನಿರ್ವಹಣೆಗಾಗಿ ಕೈಯಿಂದ ಕಳೆ ತೆಗೆಯುವಿಕೆ ಮತ್ತು ಅಂತರ-ಬೇಸಾಯ ಕ್ರಮಗಳನ್ನು ಕೈಗೊಳ್ಳುವಂತೆ ರೈತರಿಗೆ ಸಲಹೆ ನೀಡಲಾಗಿದೆ. ಬಲೆ ಬೆಳೆಯಾಗಿ (trap crop) ಬೆಳೆದಿರುವ ಬೆಂಡೆ ಗಿಡಗಳಲ್ಲಿ ಕಂಡುಬರುವ ಮೂತಿ ಹುಳುಗಳನ್ನು ಕೈಯಿಂದ ಆರಿಸಿ ನಾಶಪಡಿಸಬೇಕು. ರಸ ಹೀರುವ ಕೀಟಗಳ ನಿಯಂತ್ರಣಕ್ಕಾಗಿ, 15-25 ದಿನಗಳ ಬೆಳೆಯ ಮೇಲೆ ಪ್ರತಿ ಲೀಟರ್ ನೀರಿಗೆ 5.0 ಮಿ.ಲೀ.ನಂತೆ 5% ಸಾಂದ್ರತೆಯ ಬೇವು-ಆಧಾರಿತ ಕೀಟನಾಶಕವನ್ನು ಸಿಂಪಡಿಸಬೇಕು. ಬೆಳೆಯು 60 ದಿನಗಳನ್ನು ತಲುಪಿದ ನಂತರ, ರಸ ಹೀರುವ ಕೀಟಗಳ ಸಂಖ್ಯೆಯು ಆರ್ಥಿಕ ಹಾನಿಯ ಮಿತಿಯನ್ನು (ETL) ಮೀರಿದಾಗ, ಪ್ರತಿ ಲೀಟರ್ ನೀರಿಗೆ 1.0 ಗ್ರಾಂನಷ್ಟು 'ಡೈಫೆಂಥಿಯುರಾನ್ 50 WP' ಅನ್ನು ಸಿಂಪಡಿಸಿ.

ರಾಯಚೂರಿನಲ್ಲಿ, ರೈತರು ಕಳೆ ನಿರ್ವಹಣೆ ಮತ್ತು ಅಂತರ ಬೇಸಾಯದ ಕೆಲಸಗಳಿಗೆ ಆದ್ಯತೆ ನೀಡುವಂತೆ ಸಲಹೆ ನೀಡಲಾಗಿದೆ. ಬೆಳೆಯು 25-30 ದಿನಗಳ ಅವಧಿಯಲ್ಲಿದ್ದಾಗ, ಪ್ರತಿ ಲೀಟರ್ ನೀರಿಗೆ 1.5 ಮಿ.ಲೀ.ನಷ್ಟು 'ಪೈರಿಥಿಯೋಬಾಕ್ ಸೋಡಿಯಂ' ಕಳೆನಾಶಕವನ್ನು ಸಿಂಪಡಿಸಬೇಕು. ರಸ ಹೀರುವ ಕೀಟಗಳ ಸಂಖ್ಯೆಯು ಆರ್ಥಿಕ ಗರಿಷ್ಠ ಮಟ್ಟವನ್ನು ಮೀರಿದಾಗ, ಶಿಫಾರಸು ಮಾಡಿದ ಪ್ರಮಾಣದ 'ಫ್ಲೋನಿಕಮಿಡ್ 50% WG' (4 ಗ್ರಾಂ / 10 ಲೀಟರ್ ನೀರಿಗೆ) ಅನ್ನು ಸಿಂಪಡಿಸಬೇಕು.

ಚಾಮರಾಜನಗರ ಜಿಲ್ಲೆಯ ರೈತರಿಗೆ, ರಸ ಹೀರುವ ಕೀಟಗಳ ನಿಯಂತ್ರಣಕ್ಕಾಗಿ ಪ್ರತಿ ಎಕರೆಗೆ 8-12 ಹಳದಿ ಅಂಟು ಬಲೆಗಳನ್ನು ನೆಡಲು, ಮತ್ತು ಶಿಫಾರಸು ಮಾಡಿದ ಪ್ರಮಾಣದ 'ಫ್ಲೋನಿಕಮಿಡ್ 50% WG' (4 ಗ್ರಾಂ / 10 ಲೀಟರ್ ನೀರಿಗೆ) ಅನ್ನು ಸಿಂಪಡಿಸಲು ಸಲಹೆ ನೀಡಲಾಗಿದೆ.

*ಭಾ. ಕೃ. ಅ. ಪ. – ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ*

*ಕನ್ನಡ ಅನುವಾದ*

*ಡಾ. ನೀಲಕಂಠ ಸ. ಹಿರೇಮನಿ*